ಸಿ. ಸಿ. ನಂ.- **439/2021**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **30-08-2023** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲು- ಆರೋಪಿ ಪರ ಶ್ರೀ ಯು.ಜಿ ವಕೀಲರಿಂದ -

ಆರೋಪಿ ನನಗೆ ಬೆಂಗಳೂರಿನಲ್ಲಿ ವಾಸವಿರುವ ನನ್ನ ಸ್ನೇಹಿತನಾದ ಹಿದಾಯತ್ ಖಾನ್ ರವರ ಮೂಲಕ ಪರಿಚಯ. ನನ್ನ ಮತ್ತು ಜೈರುದ್ದೀನ್ ಖಾನ್ ಮಧ್ಯ ದೊಡ್ಡಬಳ್ಳಾಪುರದಲ್ಲಿ ಇರುವ ಆಸ್ತಿಯ ವಿಚಾರವಾಗಿ ಕರಾರು ಪತ್ರವಾಗಿರುತ್ತದೆ ಎಂದರೆ ಸರಿ. ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಆರೋಪಿಯಿಂದ ಎರಡು ಖಾಲಿ ಚೆಕ್ ಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ.

ನಿ.ಪಿ **6** ರಂತೆ ಆರೋಪಿ ಜೊತೆಯಲ್ಲಿ ನಾನು ಒಂದು ಕರಾರು ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಕರಾರು **2018** ರಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ಅಗ್ರಿಮೆಂಟ್ ನಂತೆ ಎರಡು ಚೆಕ್ ಗಳನ್ನು ಅದೇ ದಿನ ಆರೋಪಿಯು ನನ್ನ ಸ್ವಾಧೀನಕ್ಕೆ ಕೊಟ್ಟಿದ್ದರು ಎಂದರೆ ಸರಿ. ನಮ್ಮ ಅಗ್ರಿಮೆಂಟ್ ಪ್ರಕಾರ ಆರೋಪಿಯು ರೂ. **3,50,000/-** ಗಳಿಗೆ ಮಾತ್ರ ಜಾಮೀನುದಾರರು ಆಗಿದ್ದರು ಎಂದರೆ ಸರಿಯಲ್ಲ. ಸದರಿ ಅಗ್ರಿಮೆಂಟ್ ಪ್ರಕಾರ ಪ್ಲಾಟ್ ನನಗೆ ಮಾರಾಟ ಮಾಡಿಲ್ಲ ಎಂದರೆ ಶೇಕಡ **18** ರಂತೆ ರೂ. **3,50,000/-** ಗಳಿಗೆ ಹಣ ಕೊಡಬೇಕು ಎಂದು ಮಾತಾಗಿತ್ತು ಎಂದರೆ ಸಂಪೂರ್ಣ ಮೊತ್ತಕ್ಕೆ ಕೊಡಬೇಕು ಎಂದು ಆಗಿತ್ತು. ಸದರಿ ಅಗ್ರಿಮೆಂಟ್ ನಲ್ಲಿ ರೂ. **3,50,000/-** ಕ್ಕೆ ಶೇಕಡ **18** ರಂತೆ ಪ್ಲಾಟ್ ನ್ನು ಮಾರಾಟ ಮಾಡದೆ ಇದ್ದಲ್ಲಿ ಕೊಡಬೇಕೆಂದು ನಮೂದು ಇದೆ ಎಂದರೆ ಸರಿಯಲ್ಲ. ಏಪ್ರಿಲ್-**2018** ನಂತರ ಪ್ಲಾಟ್ ಮಾರಾಟ ಮಾಡಿಲ್ಲ, ಅಗ್ರಿಮೆಂಟ್ ನಂತೆ ನಡೆದುಕೊಳ್ಳಬೇಕೆಂದು ಆರೋಪಿಗೆ ನೋಟೀಸ್ ಕೊಟ್ಟಿರುತ್ತಿರಾ ಎಂದರೆ ಫೋನ್ ಮೂಲಕ ತಿಳಿಸಿರುತ್ತೇನೆ, ನೋಟೀಸ್ ಕೊಟ್ಟಿಲ್ಲ. ಏಪ್ರಿಲ್-**2018** ರಿಂದ **6** ತಿಂಗಳ ಒಳಗಡೆ ಸದರಿ ಹಣವನ್ನು ನಾನು ಮರುಪಾವತಿ ಮಾಡಲು ಕೇಳಿಲ್ಲ ಎಂದರೆ ಸರಿಯಲ್ಲ. ಅವರು ಕೊಡುತ್ತೇನೆಂದು ನನಗೆ ಭರವಸೆ ನೀಡಿರುತ್ತಾರೆ. ಏಪ್ರಿಲ್-**2018** ರಿಂದ **6** ತಿಂಗಳ ಒಳಗೆ ಚೆಕ್ ನ್ನು ನಗದೀಕರಣಕ್ಕೆ ಬ್ಯಾಂಕಿಗೆ ಹಾಕಿರುತ್ತಿರಾ ಎಂದರೆ ಇಲ್ಲ.

ಸಿ. ಸಿ. ನಂ.- **439/2021**

ಪಿ.ಡಬ್ಲ್ಯೂ. **1**

ಚೆಕ್ ಕೇವಲ 3 ತಿಂಗಳ ಒಳಗೆ ಊರ್ಜಿತವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಯಾವ ಮೊತ್ತಕ್ಕೆ ಜಾಮೀನುದಾರರು ಆಗಿದ್ದರು ಅದನ್ನು ನನಗೆ ಮರಳಿ ಕೊಡಲು ತಯಾರಾಗಿದ್ದರು ಎಂದರೆ ಸರಿಯಲ್ಲ. ಜಹೀರ್ ಅಹಮದ್ ಖಾನ್ ರವರ ಹಣವನ್ನು ಸಹ ಜಾಮೀನುದಾರರಾದ ಆರೋಪಿಯೇ ಕೊಡಬೇಕೆನ್ನುವ ದುರುದ್ದೇಶಂದ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿಃ **02-02-2023** ರಂದು ಆರೋಪಿಯು ರೂ. **2** ಲಕ್ಷಗಳನ್ನು ನನ್ನ ಖಾತೆಗೆ ಜಮಾ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ದಿಃ **28-03-2023** ರಂದು ಆರೋಪಿಯು ರೂ. **50** ಸಾವಿರಗಳನ್ನು ನನ್ನ ಖಾತೆಗೆ ಜಮಾ ಮಾಡಿರುತ್ತಾರೆ ಎಂದರೆ ಸರಿ. ದಿಃ **27-04-2023** ರಂದು ಆರೋಪಿಯು ರೂ. **50** ಸಾವಿರಗಳನ್ನು ನನ್ನ ಖಾತೆಗೆ ಜಮಾ ಮಾಡಿರುತ್ತಾರೆ ಎಂದರೆ ಸರಿ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ<br>
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.